**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂ:79/2017 ಪಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **02.02.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲು:** ಪ್ರತಿವಾದಿ ಪರ ಶ್ರೀ ಜಿ.ಎನ್.ಎಸ್ ವಕೀಲರಿಂದ:

ನಾನು ಎಂ.ಎ ತನಕ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ದಿನಾಂಕ **21.02.2011** ರಂದು ಈ ದಾವೆಯ ಪ್ರತಿವಾದಿಗಳು, ಬಸವರಾಜು ಮತ್ತು ಕೆ.ಎಸ್ ಮೂರ್ತಿರವರಿಗೆ ನೋಟಿಸ ಜಾರಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ನೋಟಿಸಿನಲ್ಲಿ ನಾನು ಸರ್ವೆ ನಂ.**27/1, 86, 87, 562, 564, 570/2** ಮತ್ತು **577** ಜಮೀನುಗಳಲ್ಲಿ **5** ರಲ್ಲಿ **1** ಭಾಗ ಆಸ್ತಿ ಬರಬೇಕು ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ನೋಟಿಸಿಗೆ ಈ ದಾವೆಯ ಪ್ರತಿವಾದಿಗಳು ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿ. ಸದರಿ ಪ್ರತ್ಯುತ್ತರ ನೋಟಿಸಿನಲ್ಲಿ ಪ್ರತಿವಾದಿಗಳು ಈಗಾಗಲೇ ವಿಭಾಗ ಆಗಿದ್ದು, ಸದರಿ ವಿಭಾಗದಲ್ಲಿ ನಾನು ನನ್ನ ಹಿಸ್ಸೆಯನ್ನು ಪಡೆದುಕೊಂಡಿರುತ್ತೇನೆ ಮತ್ತು ನಾನು ಕೇಳಿದಂತೆ **5** ರಲ್ಲಿ **1** ಭಾಗ ಆಸ್ತಿ ನೀಡಲು ನಿರಾಕರಣೆ ಮಾಡಿದ್ದರು ಎಂದರೆ ಸರಿ.

ನಾನು ಈ ದಾವೆಯನ್ನು ಹಾಕುವ ಮೊದಲು ನಿಪಿ-**5** ರಂತೆ ಪ್ರತಿವಾದಿಗಳಿಗೆ ನೋಟಿಸ ನೀಡಿರುತ್ತೇನೆ ಎಂದರೆ ಸರಿ. ನಿಪಿ-**5** ರಲ್ಲಿ ನಾನು **2011** ರಲ್ಲಿ ನೋಟಿಸ ನೀಡಿದ್ದು, ಸದರಿ ನೋಟಿಸಿನಲ್ಲಿ ನಾವು ಮನೆಯಲ್ಲಿ ಕುಳಿತು ಪರಸ್ಪರ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ತಿಳಿಸಿರುವ ಅಂಶ ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. **2011** ರಲ್ಲಿ ವಿಭಾಗ ಆಗಿದ್ದು, ಸದರಿ ವಿಭಾಗದ ಪ್ರಕಾರ ಹಿಸ್ಸೆದಾರರು ಅವರ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು ಎಂದು ರುಜುವಾತು ಪಡಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುಲ್ಲ. ನಾನು ನಿಪಿ-**5** ನೋಟಿಸಿನಲ್ಲಿ **2** ನೇ ಪ್ರತಿವಾದಿಗೆ ಸರ್ವೆ ನಂ.**570/2** ರಲ್ಲಿ **1** ಎಕರೆ **14** ಗುಂಟೆ ಜಮೀನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಪ್ರಸ್ತುತ ಸದರಿ ಆಸ್ತಿಯು ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ, ಸಾಕ್ಷಿ ಮುಂದುವರಿದು **2** ನೇ ಪ್ರತಿವಾದಿಯು ತಮ್ಮ ಮಗಳ ಮದುವೆಯ

ಸಲುವಾಗಿ ಹಣದ ಅವಶ್ಯಕತೆ ಇರುವ ಕಾರಣ ಬೇರೆಯವರಿಗೆ ಮಾರಾಟ ಮಾಡುವ ಬದಲು ನಮಗೆ ಕ್ರಯಕ್ಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು 2008 ರಲ್ಲಿ ಕ್ರಯಕ್ಕೆ ನೀಡಿರುತ್ತಾರೆ.

ಸಾಕ್ಷಿಗೆ ದಿನಾಂಕ 13.10.2008 ರ ಕ್ರಯ ಪತ್ರ ಮುಖಬೆಲೆ ಮಾಡಲಾಗಿದ್ದು, ಸದರಿ ಕ್ರಯ ಪತ್ರ ಸಾಕ್ಷಿಯು ತಮ್ಮ ಹೆಸರಿಗೆ ಆದ ಕ್ರಯ ಪತ್ರ ಎಂದು ಒಪ್ಪಿದ ಕಾರಣ ಅದನ್ನು ಪ್ರತಿವಾದಿಗಳ ಪರವಾಗಿ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ 2 ನೇ ಪ್ರತಿವಾದಿಯ ಭಾಗಕ್ಕೆ ಎಂ.ಆರ್ ಸಂ.11/1995-96 ರಂತೆ ಆಸ್ತಿ ಬಂದಿರುತ್ತದೆ ಎಂದು ಬರವಣಿಗೆ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಎಂ.ಆರ್ ಸಂ.11/1995-96 ರ ದೃಡೀಕೃತ ನಕಲನ್ನು ಮುಖಬೆಲೆ ಮಾಡಲಾಗಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಒಪ್ಪಿದ ಕಾರಣ ಅದನ್ನು ಪ್ರತಿವಾದಿಯ ಪರವಾಗಿ ನಿಡಿ-2 ಎಂದು ಗುರುತಿಸಲಾಯಿತು. ಸದರಿ ಮುಟೇಷನ ಆದೇಶದಲ್ಲಿ ಸರ್ವೇ ನಂ.577 ರಲ್ಲಿ ತಲಾ 2 ಎಕರೆ 19 ಗುಂಟೆ ಪ್ರತಿವಾದಿಗಳ ಭಾಗಕ್ಕೆ ನೀಡಲಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನನ್ನ ತಂದೆ ಸಣ್ಣ ಹಿಡುವಳಿದಾರರ ದಾಖಲೆಗಳಿಗೊಸ್ಕರ ಅವರ ಹೆಸರಿಗೆ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆದೇಶದಲ್ಲಿ ನಾನು ಮತ್ತು ನನ್ನ ಸಹೋದರರು ಒಪ್ಪಿಗೆ ನೀಡಿರುತ್ತೇವೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ನಾವು ಒಪ್ಪಿಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂ.27/1 ಜಮೀನಿನ ಖಾತೆ ನನ್ನ ಹೆಸರಿಗೆ 1985-1986 ರಲ್ಲಿ ಆಗಿರುತ್ತದೆ. ನನ್ನ ತಂದೆಯು ತಮ್ಮ ಜೀವಿತಾವಧಿಯಲ್ಲಿ ಕುಟುಂಬದ ಆಸ್ತಿಗಳನ್ನು ಎಲ್ಲರಿಗೂ ವಿಭಾಗ ಮಾಡಿಕೊಟ್ಟಿದ್ದು, ಅದರಂತೆ ದಾಖಲೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದ 3 ನೇ ಖಂಡಿಕೆಯಲ್ಲಿ ವಿಭಾಗ ಆದಂತೆ ತಿಳಿಸಿರುವ ಅಂಶಗಳು ಸುಳ್ಳು ಆಗಿರುತ್ತವೆ ಎಂದರೆ ಸರಿಯಲ್ಲ. ಸರ್ವೇ ನಂ.577 ರ 4 ಎಕರೆ 38 ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳು ತಲಾ 2.19 ಎಕರೆ ಜಮೀನಿನಲ್ಲಿ ತೋಟ ಮಾಡಿಕೊಂಡು ಸ್ವಾಧೀನನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ತಲಾ 1

ಎಕರೆ 19 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದು, ನಾನು 2 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. 2011 ರಲ್ಲಿ ವಿಭಾಗ ಆಗಿತ್ತು ಎಂದು ವಾದಪತ್ರ ಹಾಗೂ ನೋಟಿಸಿನಲ್ಲಿ ತಿಳಿಸಿರುವ ವಿಚಾರ ಹೊರತುಪಡಿಸಿ ಬೇರೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಯಾವತ್ತು ಇರುವುದಿಲ್ಲ ಮತ್ತು ಸತ್ಯಾಂಶವನ್ನು ಮರೆಮಾಚಿ ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. 2011 ರಲ್ಲಿ ವಿಭಾಗ ಆಗಿದ್ದ ಪಕ್ಷದಲ್ಲಿ ಸದರಿ ವಿಭಾಗದಂತೆ ದಾಖಲೆ ಮಾಡಿಕೊಳ್ಳಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ತೊಂದರೆ ಇರಲಿಲ್ಲ, ಆದರೆ ಪ್ರತಿವಾದಿಗಳು ದಾಖಲೆ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 2011 ರಿಂದ ಇಲ್ಲಿಯವರೆಗೆ ನನ್ನ ಹೆಸರಿಗೆ ದಾವಾ ಆಸ್ತಿ ಖಾತೆ ಇರುವುದಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 2011 ರಲ್ಲಿ ಪ್ರತಿವಾದಿಗಳು ನನ್ನ ಹೆಸರಿಗೆ ಮಾಡಿಕೊಡದ ಬಾಬ್ತು ಅವರ ವಿರುದ್ಧ ದಾವೆ ಹಾಕಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಆರೋಗ್ಯ ಸರಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ನನ್ನ ವಾದ ಪತ್ರ ಹಾಗೂ ನಿಪಿ-5 ನೋಟಿಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ 2011 ರಲ್ಲಿ ವಿಭಾಗ ಆಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮರಗಳಿಗೆ ಸುಮಾರು 34 ವರ್ಷಗಳಾಗಿರುತ್ತವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಾನು 2011-12 ರಲ್ಲಿ ಮರಗಳನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೇ ನಂ.577 ರಲ್ಲಿರುವ 4 ಎಕರೆ 38 ಗುಂಟೆ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯು ಪ್ರತಿವಾದಿಗಳ ಹೆಸರಿಗೆ ಆದ ನಂತರ ಸರ್ಕಾರದವರು ಪ್ರತಿವಾದಿಗಳ ವಿರುದ್ಧ ಉಪವಿಭಾಗಧಿಕಾರಿಯವರ ನ್ಯಾಯಾಲಯದಲ್ಲಿ ಆರ್.ಆರ್.ಟಿ ನಂ.86/1999-2000 ರಂತೆ ಒಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣವನ್ನು

ಉಪವಿಭಾಗಧಿಕಾರಿಯವರು ವಜಾ ಮಾಡಿರುತ್ತಾರೆ ಎಂದರೆ ಸರಿ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**